ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಬನ್ನಿಗನೂರಿನ ನಾಗರಾಜ ಕೋರಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿ. ಗ್ರಾಮೀಣ ಸೊಗಡಿನೊಂದಿಗೆ ಕಂಪು ಬೀರುವ ಭಾಷೆ ಅವರದು. 'ತನುಬಿಂದಿಗೆ' ಕಥಾಸಂಕಲನ, 'ಬುದ್ಧಗಿತ್ತಿಯ ನೆನಪು' ಕವನಸಂಕಲನ ಅವರ ಪ್ರಕಟಿತ ಕೃತಿಗಳು.

ಮೈಗೆ ನೆಗ್ಗಿನಮುಳ್ಳು ಚುಚ್ಚಿದಂಗಾತು. 'ಎಣ್ಣಿ ಹಚಿಗಂದ್ರ ನಿಂಗೇನಾಯ್ತಿ ದಾಡಿ... ವಾಸ್ನಿ ಆಗಲ್ಲಂದ್ರ ಮೂಗಿಗೆ ಹತ್ತೆಳ್ಳಿ ತುರಿಕ್ಯಾ.' ಅಂತ ಪಸಕ್ಕನ ಕೈಕಿತ್ಕೊಗೆದೆ. ಮತ್ತೆ ಬಿಡಲಿಲ್ಲ. ಕೂಸಿನಂಗ ಕಸಪಸಂತ ಉಸ್ರಾಡಿ ನಡ ಹೊಕ್ಕಳಿಗೆ ಕೈಯ್ಯಾಕಿದ. ಎಲ್ಲೆದೆಲ್ಲೆ ಚುಳುಕು ಆದಂಗಾಗಿ ಬೇಳಕರದ್ರ ಹುಣಿವೈತಿ... ಇವತ್ತು ಬ್ಯಾಡಂತ ಒಂದೀಟು ಮೈದೂರ ಮಲಗಿದೆ. ಪುಣ್ಯಕ ಅಭಿ ಎಚ್ಚರಿರಲಿಲ್ಲ. ಲಚಪಚ ಬಾಯಾಡಿಸುತ್ತ ಸುಮ್ನೆ ಮಲಗಿತ್ತು. ಒಂತಾಸು ಆಗಿರಬೇಕು. ಆಕಡೆ ಈಕಡೆ ಹೊಳ್ಳಾಡಿ ಏನೋ ನೆನಿಸಿಕೊಂಡ. 'ನಾಳೆ ಹುಣಿವಂದ್ರ ಉರುಕುಂದಿ ಈರಣ್ಣನ ಜಾತ್ರೆಂತಿ. ಹ್ವಾದವರ್ಷ ಚೊಚ್ಚಲ ಗಂಡುಮಗಾದ್ರ ಹರಕಿ ತೀರ್‌ಸ್ತಿನೆಂತ ಉರುಕುಂದಿ ಈರಣ್ಣಗ ಮನಸಿನ್ಯಾಗ ಬೇಡಿಕೊಂಡಿದ್ದೆ. ನಾಳೆ ಜಾತ್ರಿಗೆ ಹೋಗಾಮು.' ಅಂತ ಮತ್ತೆ ಬೆನ್ನಿಗೆ ದಪ್ಪಂತ ಗುದ್ದಿ ಏನೆನೋ ಗೊಣಗಾಡಿ ಹೋಳುಮಗ್ಗಲು ಮಲಿಗಿದ. 'ಉರುಕುಂದಿ ಈರಣ್ಣನ ಜಾತ್ರಿ ಒಂದ್‌ಬ್ಯಾರೆನೂ ನೋಡಿಲ್ಲ... ಜಾತ್ರಿ ಚೆಂದ ಆಗತೈತಿ ಅಂತಾರ ಮಂದಿ... ಈ ಸಾರಿ ನಾನು, ನಮ್ ಅಭಿ ನೋಡಿದಂಗ ಆಗುತ್ತ...' ಅಂತ ಅಷ್ಟೆ ಕೇಳಿ ಖುಷಿಗೆ ಹೋಳುಮಗ್ಗಲು ಮಲಗಿದೆ.

ಎಂದಿನಂತೆ ಮುಂಜಾನೆದ್ದು ಕೂದಲೆಣ್ಣೆ ಮಾರುವವನು ಹೇಳಿದಂತೆ, ತಲಿಸ್ನಾನ ಮಾಡಾಕ ಬಚ್ಚಲದಾಗ ಎಲ್ಲಾಬಿಚ್ಚಿ ಕೂತೆ. ತುರುಬು ಬಿಚ್ಚಿದ್ದೇ ತಡ. ಸಳಸಳ ಹಾವಿನಂಗ ಮೈ ಯೆ ಲ್ಲಾ ಕೂದಲಾಗಿ ಜಗಲಿಗಿಟ್ಟ ಅಕ್ಕಮಾದೇವಿ ಮೈಯ್ಯಾಕ ಬಂದಂಗಾಗಿ ಜಳಕ ಮಾಡಿದ್ದೇ ಗೊತ್ತಾಗಲಿಲ್ಲ. ಆಮ್ಯಾಲೆ ಚುಕ್ಕಿಸೀರೆ, ಚುಕ್ಕಿಕುಬ್ಸ ಉಟ್ಟು, ಹಸಿಕೂದಲಿಗೆ ಮಲ್ಲಿಗೆ ಹೂ ಮುಡಕಂದು, ಮ್ಯಾಚಿಗೆ ಟಿಕಳಿ ಮೆತ್ತಿ, ಹಣೆಗೆ ಈಭೂತಿ ಬಡಕಂದು, ಅಕ್ಕಮಾದೇವಿಗೆ ಸಣಮಾಡಿ ಅಭಿನ ತಯಾರಿಮಾಡಿ, ಒಂದೀಟು ಹೋಳಿಗಿ ಅನ್ನ ಸಾರಂತ ಹೆಡಿಮಾಡಿ ಜಾತ್ರಿಗೆ ಹೋಗಲು ಕೂತಿದ್ದೆ. 'ಬಡಬಡ ಬರ್ರಿ ಪಟಪಟ್ ತಗೋರಿ' ಅಂತ ಅಗಸಿಮುಂದ ಸಪ್ಪಳ ಕೇಳಿತು. ಒಮ್ಮಿಗೆ ಕಿವಿನಿಗರಿ ಕೂದಲೆಣ್ಣೆ ಮಾರುವವನಿಗೆ ರೊಕ್ಕ ಕೊಡೋ ನೆಪದಾಗ ಆತನ ಕೂಗು, ಚೆಂದನ ಮುಖ ನೋಡಬೇಕನಿಸ್ತು. ನಿಲುಗನ್ನಡಿ ಮುಂದನಿಂತು ರಪ್ಪೆ ಅಲುಗಾಡದಂಗೆ ಒಳ್ಳೊಳ್ಳಿಸಿ ಮುಖ ನೋಡಿಕೊಂಡು ರೊಕ್ಕ ಕೊಡಾಕಂತಲೆ ಹುರುಪಿಲೆ ಹೋದೆ. 'ಅವತ್ತೆ ಹೇಳಿನಲ್ಲ ರೊಕ್ಕ ಬ್ಯಾಡಂತ... ರೊಕ್ಕ ಏಟು ಬಾಳಿತ್ತು... ನನ್ಗ ರೊಕ್ಕ ಬ್ಯಾಡಬ್ಯಾಡ್ರಿ...' ಅಂತ ತಲೆದೂಗಿದ. ಸುತ್ತಮುತ್ತ ನೋಡಿ, 'ತಗೋರಿ, ರೊಕ್ಕೇನು ಪುಕ್ಸಟ್ಟೆ ಬರುತ್ತೇನು' ಅಂತ ಕೈಮುಂದ ಮಾಡಿದೆ. ಕೈ ತರತರ ನಡಗಿದ್ವು. ಭಯಕ್ಕ ಆತನ ಮುಖ ನೋಡಲಿಲ್ಲ. ತಿರಗ ಆತನೇ ಸುತ್ತಮುತ್ತ ನೋಡಿ, 'ನಿಮ್ ಚೆಂದನ ಕೂದ್ಲನೋಡಿ ರೊಕ್ಕ ತಗಲಿಕ್ಕೆ ಮನ್ಸು ಬರ್ತಿಲ್ಲ.. ನಿಮ್ ಕೂದ್ಲನೇ ನೋಡುತ್ತ ನಿಲ್ಲಬೇಕನಿಸ್ತದ... ಅಷ್ಟು ಚೆಂದ ಬೆಳದಾವು...' ಅಂತ ರಾಶಿಯಂಗ ಬೆವರಗಟ್ಟಿ, ಇಳಿಬಿದ್ದ ಹಸಿಕೂದಲು ನೋಡಿನೇ ಅಂದಿರಬೇಕು. ಸಿಟ್ಟು, ನಾಚಿಕೆ ಒಮ್ಮೆಲೆ ಬಂದಂತಾಗಿ ಕೂದಲ ಮೇಲಿನ

